

ನಿಮಿಷದೊಳಗೆ ಹಲ್ಲಿನಿಂದ ತೆಂಗಿನಕಾಯಿ ಸುಲಿಯುವ ವಿಜಯ್‌ಕುಮಾರ್ ಗಿನ್ನೆಸ್ ದಾಖಲೆ ಸೇರ ಹೊರಟಿದ್ದಾನೆ. ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ಪ್ರದರ್ಶನ ನೀಡಿದ ವಿಜಯ್‌ಗೆ ಜಯವಾಗಲಿ. ಹಾವು, ಹಲ್ಲಿ, ಗಾಜು, ಬ್ಲೇಡು ತಿನ್ನುವ ಬದಲು ತೆಂಗಿನಕಾಯಿ ಸುಲಿದು ಕೊಡುವುದು ಉಪಯುಕ್ತ ಕೆಲಸ.

ತಜಿಕಿಸ್ತಾನದಲ್ಲಿನ ಈ ಅಮೆರಿಕ ಮತ್ತು ಬ್ರಿಟನ್ನಿನ ರಾಯಭಾರಿಗಳಿಗೆ ಹೊತ್ತು ಹೋಗದು. ಫುಟ್ಬಾಲ್ ವಿಶ್ವಕಪ್‌ನ ಮೊದಲ ರೌಂಡ್‌ನಲ್ಲಿ ಅಮೆರಿಕ- ಬ್ರಿಟನ್ ಪಂದ್ಯದ ಮೇಲೆ ಬೆಟ್ ಕಟ್ಟಿದರು. ಸೋತವರು ಈಜುಗೊಳದಲ್ಲಿ ಮುಳುಗು ಹಾಕಬೇಕು. ಪಂದ್ಯ ಡ್ರಾ. ಇಬ್ಬರೂ ಈಜುಗೊಳಕ್ಕೆ ಬಿದ್ದರು. ಸದ್ಯ ಫುಲ್ ಸ್ಯೂಟ್‌ನಲ್ಲಿ ಎಂಬುದು ಷರತ್ತು. ನಿಲ್ ಸ್ಯೂಟ್ ಆಗಿದ್ದರೆ ಇಬ್ಬರೂ ತಮ್ಮ ತಮ್ಮ ದೇಶಕ್ಕೆ ವಾಪಸ್ಸಾಗಬೇಕಿತ್ತು.



ಅಮೆರಿಕದ ಸ್ವೆಡನ್‌ಗೆ ಒಂದೇ ಸಮನೆ ಕೆಮ್ಮು. ರಾತ್ರಿ ನಿದ್ರೆಗೆಟ್ಟು ಸಾಕಾದ ಪತ್ನಿ ವೈದ್ಯರ ಬಳಿ ಕರೆದೊಯ್ದಳು. ಎಕ್ಸ್‌ರೇ ಚಿತ್ರದಲ್ಲಿ ಸ್ವೆಡನ್ ಶ್ವಾಸಕೋಶದೊಳಗೆ ಏನೋ ವಿಚಿತ್ರ ವಸ್ತು ಕಾಣಿಸುತ್ತಿತ್ತು. ಪರೀಕ್ಷೆಯ ಮೇಲೆ ಪರೀಕ್ಷೆಗಳು ನಡೆದ ನಂತರ ಪತ್ತೆಯಾಗಿದ್ದು ಚಿಗುರಿದ್ದ ಶೇಂಗಾ ಗಿಡ! ಅರಿಯದೇ ನುಂಗಿದ್ದ ಶೇಂಗಾ ಶ್ವಾಸಕೋಶಕ್ಕೆ ತೆರಳಿ ಅಲ್ಲಿಯ ತೇವಾಂಶ ಹೀರಿಕೊಂಡು ಚಿಗುರಿತ್ತು. ಅದಕ್ಕೇ ಹಿರಿಯರು ಮಕ್ಕಳಿಗೆ ಹೇಳುವುದು- ಬೀಜ ನುಂಗಿದರೆ ಹೊಟ್ಟೆಯೊಳಗಿಂದ ಗಿಡ ಹೊರಬರುತ್ತೆ ಎಂದು.

ಅಮೆರಿಕದ ನಾಲ್ವರು ಸಹೋದರಿಯರಿಗೆ ಅದೇನಾಯ್ತೋ? ಒಂದು, ಎರಡು, ಮೂರು, ನಾಲ್ಕು ಎಂದು ಸಾಲಾಗಿ ನಾಲ್ಕು ದಿನ ತಲಾ ಒಂದೊಂದಾಗಿ ನಾಲ್ಕು ಮಕ್ಕಳಿಗೆ ಜನ್ಮವಿತ್ತರು. ಅದೂ ಒಂದೇ ಆಸ್ಪತ್ರೆಯಲ್ಲಿ. ವೈದ್ಯರು ಬೆಪ್ಪು. ಸಂತಾನ ಯೋಜನೆ ಪೂರ್ವಯೋಜಿತ ಅಲ್ಲವಂತೆ.



ಇಂಗ್ಲೆಂಡ್‌ನ ಅಮ್ಯೂಸ್‌ಮೆಂಟ್ ಪಾರ್ಕ್ ಒಂದರಲ್ಲಿ ಅಂದು ನ್ಯೂಡ್‌ಗಳ ನೂಕುನುಗ್ಗಲು. ರೋಲರ್‌ಕೋಸ್ಟರ್‌ನಲ್ಲಿ ನಗ್ನರಾಗಿ ಕುಳಿತು ರೌಂಡ್ ಹೊಡೆಯುವ ದಾಖಲೆಯ ಕಸರತ್ತು. 40 ಮಂದಿಗೆ ಅವಕಾಶ. ತಿರಸ್ಕರಿಸಲ್ಪಟ್ಟವರು 64. ಅಲ್ಲಲ್ಲಿ ಚೂರುಪಾರು ಅರಿವೆ ಅಂಟಿಸಿಕೊಂಡಿದ್ದೇ ನಿರಾಕರಣೆಗೆ ಕಾರಣವಂತೆ.

92ರ ಅಜ್ಜ ಪಾಲ್ ಮಾರ್ಟ್‌ಗೆ (ಎಡಕ್ಕಿರುವವರು) ನಿಜಕ್ಕೂ ಬತ್ತದ ಉತ್ಸಾಹ. ಜರ್ಮನಿಯಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಅದೂ ಗೇ ಗೇಮ್ಸ್‌ನಲ್ಲಿ. ನಿಜಕ್ಕೂ ಬತ್ತದ ಉತ್ಸಾಹವೇ.



ಉತ್ತರ ಕೊರಿಯಾ ಝೆಕ್ ಗಣರಾಜ್ಯದ ಬಳಿ ಕಂಡಾಬಟ್ಟೆ ಸಾಲ ಮಾಡಿಕೊಂಡಿದೆ. ತೀರಿಸಲಾಗದೆ ಒದ್ದಾಡುವ ಕೊರಿಯಾಗೆ ಝೆಕ್ ಹಣಕಾಸು ಸಚಿವರು ಒಳ್ಳೆಯ ಪ್ರಸ್ತಾವ ಮುಂದಿಟ್ಟಿದ್ದಾರೆ. ಕೊರಿಯಾ ಝೆಕ್‌ಗೆ 20 ಟನ್ ಜಿನ್‌ಸೆಂಗ್ ಪುಕ್ಕಟೆ ಕಳಿಸಿದರೆ ಸಾಲ ಮಾಫಿ. ಏನಿದು ಜಿನ್‌ಸೆಂಗ್? ಪುರುಷರ ಲೈಂಗಿಕ ಶಕ್ತಿ ಹೆಚ್ಚಿಸುವ ಬೇರು. ಕೊರಿಯಾದಲ್ಲಿ ಬರಪೂರು ಬೆಳೆಯುತ್ತಾರಂತೆ. ಸರಿಯಾದ ಕಡೆಯೇ ಝೆಕ್ ಸಚಿವರು ಏಟು ಹಾಕಿದ್ದಾರೆ.

ಇಂಡೋನೇಷ್ಯಾ ಪಾರ್ಲಿಮೆಂಟ್ ಹೊರಗಡೆ ಬೃಹತ್ ತೆರೆಯ ಮುಂದೆ ನೆರೆದಿದ್ದ ಪತ್ರಕರ್ತರಿಗೆ, ರಾಜಕಾರಣಿಗಳಿಗೆ ಷಾಕ್. ರಾಜಕೀಯ ಸುದ್ದಿಗಾಗಿ ಕಾದಿದ್ದವರಿಗೆ ಅಶ್ಲೀಲ ಚಿತ್ರಗಳ ಬಿತ್ತರ. ತುಂಟಾಟ ಮಾಡಿದವರ ಪತ್ತೆಗೆ ರಾಜಕಾರಣಿಗಳು ಹೊರಟರು. ಪತ್ರಕರ್ತರು ಅದನ್ನೇ ಸುದ್ದಿ ಮಾಡಿದರು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65